# ಉಪನಿರ್ದೇಶಕರ ಕಚೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದಕ್ಷಿಣ) ಜಿಲ್ಲೆ.

**2023–24ನೇ ಸಾಲಿನ ಅಭ್ಯಾಸ ಪರೀಕ್ಷೆ,**

ತರಗತಿ : ಹತ್ತನೇ ತರಗತಿ    ವಿಷಯ : ಪ್ರಥಮ ಭಾಷೆ ಕನ್ನಡ    ಗರಿಷ್ಠ ಅಂಕಗಳು : 100,    ಸಮಯ : 3 ಗಂಟೆ, 15 ನಿಮಿಷ

---

ಸೂಚನೆಗಳು : 1. ಈ ಪ್ರಶ್ನೆ ಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ 45 ಪ್ರಶ್ನೆಗಳನ್ನು ಹೊಂದಿದೆ.

2. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ನೀಡಲಾಗಿದೆ.

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. **6 x 1 = 6**

1. 'ಕೇಳು' ಧಾತುವಿನ ನಿಶೇದಾರ್ಥಕ ರೂಪ :
   ಎ) ಕೇಳನು    ಬಿ) ಕೇಳೋಣ    ಸಿ) ಕೇಳಿಯಾನು    ಡಿ) ಕೇಳಿದನು
2. ಕ್ರಿಯೆಯ ಸ್ಥಾನದಲ್ಲಿ ನಿಂತು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯ :
   ಎ) ಕ್ರಿಯಾರ್ಥಕಾವ್ಯಯ    ಬಿ) ಸಂಬಂಧಾರ್ಥಕಾವ್ಯಯ    ಸಿ) ಅನುಕರಣಾವ್ಯಯ    ಡಿ) ಸಾಮಾನ್ಯಾವ್ಯಯ
3. 'ಮನ್ವಂತರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ. :
   ಎ) ಲೋಪಸಂಧಿ    ಬಿ) ಆಗಮಸಂಧಿ    ಸಿ) ಆದೇಶ ಸಂಧಿ    ಡಿ) ಯಣ್ ಸಂಧಿ
4. ಪೂರ್ವೋತ್ತರ ಪದಗಳ ಅರ್ಥ ಪ್ರಧಾನವಾಗದೆ ಅನ್ಯ ಪದದ ಅರ್ಥ ಪ್ರಧಾನವಾಗಿ ಬರುವ ಸಮಾಸ :
   ಎ) ತತ್ಪುರುಷ    ಬಿ) ಕರ್ಮಧಾರೆಯ    ಸಿ) ದ್ವಂದ್ವ    ಡಿ) ಬಹುವ್ರೀಹಿ
5. ಪ್ರಾಸಾಕ್ಷರದ ಹಿಂದಿನ ಅಕ್ಷರವು ದೀರ್ಘಸ್ವರದಿಂದ ಕೂಡಿದ್ದರೆ :
   ಎ) ಗಜಪ್ರಾಸ    ಬಿ) ವೃಷಭಪ್ರಾಸ    ಸಿ) ಸಿಂಹಪ್ರಾಸ    ಡಿ) ಅಜಪ್ರಾಸ
6. "ಭೀಮನು ಯುದ್ಧದಲ್ಲಿ ದುಶ್ಯಾಸನನ್ನು ಕೊಂದದ್ದರಿಂದ ಅವನ ಬಲ ಮತ್ತಷ್ಟು ವೃದ್ಧಿಸಿತು." ವಾಕ್ಯದ ಈ ಪ್ರಭೇದಕ್ಕೆ ಸೇರಿದೆ :
   ಎ) ಸಾಮಾನ್ಯವಾಕ್ಯ    ಬಿ) ಮಿಶ್ರವಾಕ್ಯ    ಸಿ) ಸಂಯೋಜಿತವಾಕ್ಯ    ಡಿ) ಸರಳವಾಕ್ಯ

**II.** ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನುಬರೆಯಿರಿ **4 x 1 = 4**

7. ನೋಡಲು : ಕೃದಂತಾವ್ಯಯ : : ನೋಟ : ________
8. ವಂಧ್ಯಾ : ಬಂಜೆ : : ಕುಠಾರ : ________
9. ಮೊತ್ತ ಮೊದಲು : ದ್ವಿರುಕ್ತಿ : : ಭೀಮಾರ್ಜುನರು : ________
10. ಕರಣಾರ್ಥ : ತೃತೀಯ ವಿಭಕ್ತಿ : : ಸಂಬಂಧ : ________

**III.** ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. **7 x 1 = 7**

11. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?
12. ಯಾರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ?
13. ದುಷ್ಟಬುದ್ಧಿಯ ತಂದೆಯ ಹೆಸರೇನು?
14. ಶಬರಿಯು ಯಾರ ಆಶ್ರಮದಲ್ಲಿ ವಾಸವಿದ್ದಳು?
15. ಲವನು ಯಜ್ಞಾಶ್ವವನ್ನು ಯಾವುದರಿಂದ ಕಟ್ಟಿದನು?
16. ಹಕ್ಕಿಯ ಕಣ್ಣುಗಳು ಯಾವುವು?
17. ಗೋವಿಂದಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗ ಯಾವುದು?

**IV.** ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **10 x 2 = 20**

18. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ?
19. ದುಡ್ಡಿನ ಇತಿಹಾಸ ಎಂತಹದ್ದು ಎಂದು ಲೇಖಕರು ತಿಳಿಸಿದ್ದಾರೆ?.
20. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು?
21. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಷೆಯಿಂದ ಹೇಳಿದ್ದೇನು?
22. ಪಾರ್ಥ–ಭೀಮರ ಬಗ್ಗೆ ದುರ್ಯೋಧನನ ಅಭಿಪ್ರಾಯವೇನು?
23. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನನು ಹೇಳುವುದೇಕೆ?
24. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?
25. ಪೆರಿಯಾರ್ ಚಳುವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.
26. 'ವಸಂತ ಮುಖ ತೋರಲಿಲ್ಲ' ಪದ್ಯದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?.
27. ಅಮೃತ್‌ಸರದ ಜಲಿಯನ್ ವಾಲಾಭಾಗ್ ನಲ್ಲಿರುವ ಒಕ್ಕಣೆಯೇನು?

**V.** ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. **2 x 3 = 6**

28. ಸಾರಾ ಅಬೂಬಕ್ಕರ್
29. ಜಿ.ಎಸ್ ಶಿವರುದ್ರಪ್ಪ

**VI.** ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. **1 x 3 = 3**

30. ನಿಮಗೆಪೊಡೆಮಟ್ಟು ಪೋಪೀ
    ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ॥

**VII.** ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ. ಲಕ್ಷಣ ಬರೆದು ಸಮನ್ವಯಗೊಳಿಸಿ. **1 x 3 = 3**

31. "ಮಾತು ಬಲ್ಲವನಿಗೆ ಜಗಳವಿಲ್ಲ ಊಟ ಬಲ್ಲವನಿಗೆ ರೋಗವಿಲ್ಲ"

**VIII.** ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. **1 x 3 = 3**

32. ತಾಳಿದವನು ಬಾಳಿಯಾನು. ಅಥವಾ ಮಿಂಚಿ ಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ.

**IX.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. **6 x 3 = 18**

33. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ"
34. "ನಿಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು"
35. "ಈತನ ಮಾತು ಅಶ್ರುತಪೂರ್ವಂ"
36. "ಸಾರ್ವಭೌಮರಾ ನೆತ್ತಿಯ ಕುಕ್ಕಿ"
37. "ಅರಸುಗಳ ವಾಜಿಯಂ ಬಿಡು"
38. "ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ"

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. **1 x 4 = 4**

39. ಹಸುರಾಗಸ -------------- ಅಥವಾ ಹೊಸಹೂವಿನ-----------------

---------------------------- ----------------------------

---------------------------- ----------------------------

----------------------ಬಿಸಿಲೂ ---------------------ಯುಸಿರೂ

**XI.** ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. **1 x 4 = 4**

40. ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಪಾಂಡವ
ಜನಪ ಕೌರವ ಜನಪರೋಲೈಸುವರು ಗದ್ದುಗೆಯ
ನಿನಗೆ ಕಿಂಕರವೆರೆಡು ಸಂತತಿ
ಯೆನಿಸಲೊಲ್ಲದೆ ನೀನು ಧುರಿಯೋ
ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ

**XII.** ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2 x 4 = 8**

41. ನಾಲ್ವಡಿಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

ಅಥವಾ

ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

42. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ?

ಅಥವಾ

ದ್ರೋಣನು ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ಬರೆಯಿರಿ?

**XIII.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **1 x 4 = 4 (2 + 2)**

ಚೆನ್ನಮ್ಮಾಜಿಯು ಕೊಟ್ಟಿಪುರದ ಸಿದ್ದಪ್ಪಶೆಟ್ಟರ ಕುವರಿ.ಕೆಳದಿಯ ಸೋಮಶೇಖರನು ಈಕೆಯನ್ನು ವಿವಾಹವಾದನು.ಕ್ಷುಲ್ಲಕರ ಸೆಳೆವಿಗೆ ಸಿಲುಕಿ ವ್ಯಸನಾಸಕ್ತನಾದ ಸೋಮಶೇಖರನನ್ನು ಬಿಜಾಪುರದ ದಂಡಿನ ನಾಯಕ ಜನ್ನೋಪಂತನು ಕೊಂದನು.ಇದರಿಂದಾಗಿ ಕೆಳದಿಯ ಸಂಸ್ಥಾನ ಗಂಡಾಂತರಕ್ಕೆ ಗುರಿಯಾಯಿತು.ಅಸಾಧಾರಣ ಧೈರ್ಯಶಾಲಿಯಾದ ಚೆನ್ನಮ್ಮಾಜಿ ಜಾಣತನದಿಂದ ವರ್ತಿಸಿದಳು.ಧಾರುಣವಾದ ಪತಿಯ ಮರಣದ ದುಃಖವನ್ನು ನುಂಗಿಕೊಂಡು ರಾಷ್ಟ್ರದ ಹಿತಚಿಂತನೆಗೆ ಮುಂದಾದಳು.ಚಾಣಾಕ್ಷೆಯಾದ ಈಕೆ ಅಲ್ಪಾವಧಿಯಲ್ಲಿಯೇ ರಾಜನೀತಿಯ ರಹಸ್ಯವನ್ನು ಅರಿತು ಕಠೋರ ಯೋಜನೆಗಳನ್ನು ಕೈಗೊಂಡಳು.ಅನ್ಯಾಯವಾಗಿ ತನ್ನ ಪತಿಯನ್ನು ಕೊಂದ ಜನ್ನೋಪಂತನನ್ನು ಕೊಂದು ಸೇಡು ತೀರಿಸಿಕೊಂಡಳು.ಶತೃಗಳು ಚೆನ್ನಮ್ಮಾಜಿಯ ಕೈಯಲ್ಲಿ ಆಡಳಿತ ಇರದಂತೆ ಮಾಡಲು ತಂತ್ರ ಹೂಡಿದರು.ಅರಮನೆಯ ಸಂಬಂಧಿಕನನ್ನು ಪ್ರತಿಸ್ಪರ್ಧಿಯಾಗಿಸಿದರು.ಆದರೆ ಈ ಕುಚೋದ್ಯಗಳನ್ನೆಲ್ಲ ಚೆನ್ನಮ್ಮಾಜಿ ಮೆಟ್ಟಿ ನಿಂತಳು.1677ರಲ್ಲಿ ನಾಡಿನ ಜನರೆಲ್ಲ ಸೇರಿ ಚೆನ್ನಮ್ಮಾಜಿಗೆ ಪಟ್ಟಾಭಿಷೇಕ ಮಾಡಿದರು.ತರುವಾಯ ಬಸಪ್ಪನಾಯಕನನ್ನು ದತ್ತುಪುತ್ರನಾಗಿ ಸ್ವೀಕರಿಸಿ ರಾಜ್ಯಭಾರ ಮಾಡಿದಳು.ಕೇವಲ ಸಂಗ್ರಾಮ ಕಾರ್ಯವಲ್ಲದೆ ಅನೇಕ ಪ್ರಜಾಹಿತ ಕಾರ್ಯಗಳನ್ನು ಧರ್ಮ ಕಾರ್ಯಗಳನ್ನು ಮಾಡಿದಳು ತನ್ನ ಪತಿಯ ನೆನಪಿಗಾಗಿ ಅಗ್ರಹಾರಗಳನ್ನು ಸ್ಥಾಪಿಸಿದಳು.ದೇವರ ಗುಡಿಗಳನ್ನು ಭದ್ರಗೊಳಿಸಿದಳು.ಉತ್ಸವಗಳನ್ನು ಸಾಂಗಗೊಳಿಸಿದಳು.ಮಠಗಳನ್ನು ಕಟ್ಟಿಸಿದಳು, ಜಾತಿ ಮತ್ತು ಭೇದ ಎಣಿಸದೆ ನಾನಾ ವಿಧದ ಶಾಶ್ವತ ದಾನಗಳನ್ನು ನೀಡಿ ಚೆನ್ನಮ್ಮಾಜಿ ಕೀರ್ತಿಶೇಷಳಾದಳು.

ಪ್ರಶ್ನೆಗಳು :43. ಅ) ಚೆನ್ನಮ್ಮಾಜಿ ಪತಿಯ ಸಾವಿನ ಸೇಡನ್ನು ಹೇಗೆ ತೀರಿಸಿಕೊಂಡಳು?

ಆ) ಚೆನ್ನಮ್ಮಾಜಿಯು ಕೀರ್ತಿಶೇಷಳಾಗಲು ಕಾರಣವಾದ ಅಂಶಗಳಾವುವು?

**XIV.** ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. **1 x 5 = 5**

44. ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯ 'ಶ್ರೀನಿಧಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಶಾಲಾ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಬೆಂಗಳೂರಿನ ಜಯನಗರದಲ್ಲಿ ವಾಸವಿರುವ 'ಉಷಾದೇವಿ' ಎಂಬ ಹೆಸಿನ ತಾಯಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಮೂಡಿಗೆರೆಯ ಗೌತಮ ಪ್ರೌಢಶಾಲೆಯ ವಿದ್ಯಾರ್ಥಿ 'ತನ್ಮಯ' ಎಂದು ಭಾವಿಸಿಕೊಂಡು ನಿಮ್ಮ ಗ್ರಾಮದಲ್ಲಿ ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸುವಂತೆ ಕೋರಿ ನಿಮ್ಮ ಕ್ಷೇತ್ರದ ಶಾಸಕರಿಗೆ ಒಂದು ಪತ್ರ ಬರೆಯಿರಿ.

**XV.** ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. **1 x 5 = 5**

45. ಗ್ರಾಮ ನೈರ್ಮಲ್ಯ ಅಥವಾ ಮಹಿಳಾ ಸಬಲೀಕರಣ.